# ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕೂಡ್ಲಿಗಿ

# ಸಿ ಸಿ - 47/2019

ದಿನಾಂಕಃ 23.02.2026 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

| | | |
|---|---|---|
| ಹೆಸರು | : | ಕೃಷ್ಣ ನಾಯ್ಕ. ಎ |
| ತಂದೆಯ ಹೆಸರು | : | ಅಣ್ಣಪ್ಪ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಪಿ.ಐ, ರೈಲ್ವೇ ಪೊಲೀಸ್ ಠಾಣೆ, ದಾವಣಗೆರೆ |
| ವಾಸಸ್ಥಳ | : | ದಾವಣಗೆರೆ |

## ಮುಖ್ಯ ವಿಚಾರಣೆ ಸ.ಸ.ಅ ರವರಿಂದಃ

ನಾನು ದಿಃ 15.09.2017 ರಿಂದ 30.06.2019 ರವರೆಗೆ ಹೊಸಳ್ಳಿ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದಲ್ಲಿ ಗಾಯಾಳು ಮೃತಪಟ್ಟ ಬಗ್ಗೆ ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಯಿಂದ ದಿಃ 18.12.2017 ರಂದು ಸಂಜೆ ಮಾಹಿತಿ ಬಂದಿದ್ದು, ಅದರಂತೆ ನ್ಯಾಯಾಲಯಕ್ಕೆ ದಿಃ 20.12.2017 ರಂದು ಭಾ.ದಂ.ಸಂ ಕಲಂ 304-ಎ ರಡಿ ಪ್ರಕರಣ ದಾಖಲಿಸಿಕೊಳ್ಳಲು ಅನುಮತಿ ನಮ್ಮ ಸಿಬ್ಬಂಧಿ ಕೋರಿರುತ್ತಾರೆ. ಅದರಂತೆ ನಾನು 304-ಎ ರಡಿ ಪ್ರಕರಣ ದಾಖಲಿಸಿರುತ್ತೇನೆ. ಆ ನಂತರ ಸದರಿ ವ್ಯಕ್ತಿಯ ಶವ ಪಂಚನಾಮೆ ಜರುಗಿಸಲು ಚಾ.ಸಾ 17 ರವರನ್ನು ನಿಯೋಜಿಸಿರುತ್ತೇನೆ. ದಿಃ 20.12.2017 ರಂದು ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಯವರಿಂದ ಪಿ.ಎಂ ವರದಿಯನ್ನು ಪಡೆದಿರುತ್ತೇನೆ.

ಸದರಿ ಅನುಮತಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ 10 ಎಂದು ಗುರುತಿಸಲಾಯಿತು. ಸದರಿ ಪಿ.ಎಂ ವರದಿಯನ್ನು ಈಗಾಗಲೆ ನಿ.ಪಿ 6 ಎಂದು ಗುರುತಿಸಲಾಗಿದೆ.

ಮೃತ ವ್ಯಕ್ತಿಯು ಸದರಿ ಅಪಘಾತದಲ್ಲಿ ಆದ ಗಾಯಗಳಿಂದ ಮೃತಪಟ್ಟಿದ್ದಾನಾ ಎಂದು ಮಾಹಿತಿ ಹೇಳಿದ್ದು ಕಿಮ್ಸ್ ಹುಬ್ಬಳ್ಳಿಯವರು ದಿಃ 13.12.2018 ರಂದು ವರದಿ ನೀಡಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿರುತ್ತೇನೆ.

ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ 11 ಎಂದು ಗುರುತಿಸಲಾಯಿತು.

ದಿಃ 17.12.2018 ರಂದು ಈ ಪ್ರಕರಣದ ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿ ವಿರುದ್ಧ ದೋಷಾರೋಪಣೆ ಪತ್ರ ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ</u>**

ಮೃತ ಮುಸ್ತಫರವರು ಸದರಿ ಅಪಘಾತದಿಂದ ಉಂಟಾದ ಗಾಯಗಳಿಂದ ಮೃತಪಟ್ಟಿಲ್ಲ ಆದರೂ ಸಹ ಆರೋಪಿ ವಿರುದ್ದ ಸುಳ್ಳು ದೋಷರೋಪಣೆ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತರ ವಾರಸುದಾರರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಸುಳ್ಳು ದೋಷರೋಪಣೆ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪನ್ನು ಮಾಡದೆ ಇದ್ದರು ಆರೋಪಿ ವಿರುದ್ಧ ಸುಳ್ಳು ದೋಷರೋಪಣೆ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

**ಓ,ಹೇ,ಕೇ,ಸರಿ ಇದೆ,**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**